# ಅಪೂರ್ವ ಲಕ್ಷ್ಮಣರೇಖೆಗಳು





ಆರ್.ಕೆ. ನಾರಾಯಣ್‌ರ 'ದ ಎಮರಾಲ್ಡ್ ರೂಟ್' ಕೃತಿಗೆ ಆರ್.ಕೆ. ಲಕ್ಷ್ಮಣ್ ಬಿಡಿಸಿದ ರೇಖಾಚಿತ್ರಗಳು ನಾಡಿನ ಸಾಂಸ್ಕೃತಿಕ ಸಿರಿವಂತಿಕೆಯನ್ನು ಉಸುರುವಂತಿವೆ. 2021 ಲಕ್ಷ್ಮಣ್‌ರ ಜನ್ಮಶತಮಾನೋತ್ಸವ ವರ್ಷ. ಲಕ್ಷ್ಮಣ್‌ರ ಚಿತ್ರಕೃತಿಗಳನ್ನು ನೆನಪಿಸಿಕೊಳ್ಳುವುದು ಅವರಿಗೆ ಸಲ್ಲುವ ಅರ್ಥಪೂರ್ಣ ಗೌರವ.

■ ಎನ್. ಜಗನ್ನಾಥ ಪ್ರಕಾಶ್

ಅಷ್ಟೇನೂ ಜನಮಾನ್ಯತೆ ಪಡೆಯದ, ಕೆಲವರು ಅಪಶಕುನವೆಂದು ಭಾವಿಸಿದ ಕಾಗೆಯನ್ನು ತಮ್ಮ ಲಾಂಛನ ಪಕ್ಷಿಯನ್ನಾಗಿ ಮಾಡಿಕೊಂಡಿದ್ದವರು ಆರ್.ಕೆ. ಲಕ್ಷ್ಮಣ್ (ಅ. 24, 1921 – ಜ. 26, 2015). ಅಂತರರಾಷ್ಟ್ರೀಯ ಖ್ಯಾತಿಯ ವ್ಯಂಗ್ಯ ಚಿತ್ರಕಾರ ಲಕ್ಷ್ಮಣ್ ಅವರ ವ್ಯಂಗ್ಯಚಿತ್ರಗಳು ಜನಸಾಮಾನ್ಯರ ದುಃಖ ದುಮ್ಮಾನಗಳ ಮಾರ್ಮಿಕ ಅಭಿವ್ಯಕ್ತಿಗಳು.

ಶ್ರೀಸಾಮಾನ್ಯನ ದಿನನಿತ್ಯದ ಕಷ್ಟ ಕಾರ್ಪಣ್ಯಗಳನ್ನು ಅರ್ಥಪೂರ್ಣ ರೇಖೆಗಳ ಮೂಲಕ ಹೊರಹೊಮ್ಮಿಸುತ್ತಿದ್ದ ಲಕ್ಷ್ಮಣ್ ಹುಟ್ಟಿದ್ದು ಮೈಸೂರಿನಲ್ಲಿ. ಕಲಾಶಾಲೆಯಲ್ಲಿ ಕಲಿಯದಿದ್ದರೂ ಚಿತ್ರ ಬಿಡಿಸುವುದನ್ನು ವೃತ್ತಿ ಮಾಡಿಕೊಂಡ ಅವರ ಕಲೆಗೆ ಮೊಟ್ಟ ಮೊದಲು ಜಾಗ ಮಾಡಿಕೊಟ್ಟಿದ್ದು ರಾಶಿ ಸಂಪಾದಕತ್ವದ ಕನ್ನಡ 'ಕೊರವಂಜಿ' ಮಾಸಿಕ.

'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ವ್ಯಂಗ್ಯಚಿತ್ರ ಅಂಕಣ ಬರೆಯುತ್ತ, ತಮ್ಮ ಮೊನಚು ಗೆರೆಗಳಿಂದ ಪ್ರಚಲಿತ ವಿದ್ಯಮಾನಗಳಿಗೆ ಹೊಸ ಆಯಾಮ ಕಟ್ಟಿಕೊಡುತ್ತಿದ್ದ ಲಕ್ಷ್ಮಣ್‌ರ ಸೃಜನಶೀಲತೆ ಮುಟ್ಟದ ಕ್ಷೇತ್ರವಿರಲಿಲ್ಲ. ತಮ್ಮ ಸೃಜನಶೀಲತೆಗೆ ಅಕ್ಷಯಪಾತ್ರೆಯಂತೆ ಗ್ರಾಸ ಒದಗಿಸುತ್ತಿದ್ದ ರಾಜಕೀಯ ಹಾಗೂ ರಾಜಕಾರಣದ ತೆರೆಮರೆಯ ಆಟಗಳ ಕುರಿತು ಅವರು ಸಾಕಷ್ಟು ವ್ಯಂಗ್ಯಚಿತ್ರಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಆಯ್ದ ಚಿತ್ರಗಳು ಸಂಕಲನಗೊಂಡು ಪುಸ್ತಕರೂಪದಲ್ಲಿ ಪ್ರಕಟವಾಗಿವೆ.

1970ರ ದಶಕದಲ್ಲಿ ಪ್ರತ್ಯೇಕ ಇಲಾಖೆಯಾಗಿ ರೂಪುಗೊಂಡ 'ಕರ್ನಾಟಕ ವಾರ್ತಾ ಇಲಾಖೆ', ನಾಡಿನ ಹಿರಿಮೆ ಗರಿಮೆಗಳನ್ನು ನಾಡಿನೆಲ್ಲೆಡೆ ಪಸರಿಸುವ ಅನೇಕ ಮಹತ್ವದ ಕೆಲಸಗಳನ್ನು ಕೈಗೆತ್ತಿಕೊಂಡಿತು. ಆಗ ಇಲಾಖೆಯ ಪ್ರಯತ್ನಗಳಿಗೆ ಬೆಂಬಲವಾಗಿ ಒದಗಿಬಂದದ್ದು ಲಕ್ಷ್ಮಣ್‌ರ ಕುಂಚ. ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿ, ಚಿರಂಜೀವಿ ಸಿಂಗ್ 'ವಾರ್ತಾ ಇಲಾಖೆ'ಯ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ರಾಷ್ಟ್ರಮಟ್ಟದ ಲೇಖಕರು, ಛಾಯಾಚಿತ್ರಕಾರರು, ಚಿತ್ರಕಾರರನ್ನು ಕನ್ನಡ ನಾಡಿಗೆ ಆಹ್ವಾನಿಸಿ ಅವರಿಂದ ಕರ್ನಾಟಕದ ಬಗ್ಗೆ ಗುಣಮಟ್ಟದ ಕೃತಿಗಳನ್ನು ಬರೆಸಿ ಪ್ರಕಟಿಸಲಾಯಿತು. ಆರ್.ಕೆ. ನಾರಾಯಣ್,

